**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ ಶಿವಮೊಗ್ಗ :ತಾ**

**ತರಗತಿ: 4** **ವಿಷಯ: ಕನ್ನಡ** **ಮಾರ್ಗದರ್ಶಕರು: ಶ್ರೀ ಸೋಮಲಿಂಗಪ್ಪ ಜಿ**

# ಮಳೆ ಪದ್ಯ -ವರ್ಕ್ ಶೀಟ್

## ಲಿಂಕನ್ನು ಕ್ಲಿಕ್ಕಿಸಿ ಮಳೆ ಹಾಡನ್ನು ಕೇಳಿ ರಾಗವಾಗಿ ಹಾಡುವುದನ್ನು ಕಲಿಯಿರಿ



ಪಾಠ – ೪

ಮಳೆ (ಪದ್ಯ)

ಬಿಸಿಲ ಝಳಕೆ ಕಡಲ ನೀರು
ಆವಿಯಾಯಿತು ।
ಆವಿಯಾಗಿ ನೆಲದ ಕಡೆಗೆ
ಬೀಸಿ ಬಂದಿತು ॥೧॥

ನೆಲದ ಮೇಲೆ ಗುಡ್ಡಬೆಟ್ಟ
ಅಡ್ಡವಾಯಿತು ।
ತಡೆದು ನಿಂತ ಮೋಡವೆಲ್ಲ
ಮೇಲಕೇರಿತು ॥೨॥

ಘಳಿಗೆಯೊಳಗೆ ಬಾನು ತುಂಬ
ಮೋಡ ಕವಿಯಿತು ।
ಮಿಂಚು ಮಿಂಚಿ ಜಗವು ಬೆಳಗಿ
ಗುಡುಗು ಗುಡುಗಿತು ॥೩॥

ಮೋಡ ಮೇಲಕೇರಿದಾಗ
ತಂಪು ತಗುಲಿತು ।
ಆವಿ ತಣಿದು ಭಾರವಾಗಿ
ಕುಸಿಯತೊಡಗಿತು ॥೪॥

LIVEWORKSHEETS